ಕರ್ನಾಟಕ ಸರ್ಕಾರ

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು

**2019-20ನೇ ಸಾಲಿನ ಪಿ.ಬಿ.ಬಿ.ಎಸ್ಸಿ. ನರ್ಸಿಂಗ್ ಮತ್ತು ಬಿ.ಎಸ್.ಸಿ ಅಲೈಡ್ ಹೆಲ್ತ್ ಸೈನ್ಸ್ ಲ್ಯಾಟರಲ್ ಕೋರ್ಸುಗಳ ಪ್ರವೇಶಕ್ಕಾಗಿ ದಾಖಲಾತಿಗಳ ಪರಿಶೀಲನೆ – ಸೂಚನೆಗಳು.**

**1)** ಎಲ್ಲಾ ಅಭ್ಯರ್ಥಿಗಳು ಅಂದರೆ ಸಾಮಾನ್ಯ ವರ್ಗ, ಮೀಸಲಾತಿ ಪ್ರವರ್ಗಗಳು ಮತ್ತು ವಿಶೇಷ ಪ್ರವರ್ಗದ ಎಲ್ಲಾ ವಿದ್ಯಾರ್ಥಿಗಳು ದಾಖಲಾತಿ ಪರಿಶೀಲನೆಗೆ ಹಾಗೂ ಆಪ್ಷನ್ ಎಂಟ್ರಿ ಮಾಡಲು ಅರ್ಹತೆ ಪಡೆಯುವುದಕ್ಕಾಗಿ ಎಲ್ಲಾ ಮೂಲ ದಾಖಲೆಗಳೊಂದಿಗೆ **ಕರ್ನಾಟಕ ಪರೀಕ್ಷಾ ಪ್ರಾಧಿಕಾರದ 18ನೇ ಕ್ರಾಸ್, ಮಲ್ಲೇಶರಂ,ಬೆಂಗಳೂರು ಮಾತ್ರ ಹಾಜರಾಗಬೇಕು.**
**(ವಿ.ಸೂ:ಪೋಸ್ಟ್ ಬೇಸಿಕ್ ನರ್ಸಿಂಗ್ ಕೋರ್ಸಿಗೆ ಸೇವಾನಿರತ ಕೋಟಾದಲ್ಲಿ ಆಯ್ಕೆ ಬಯಸಿರುವ ಸೇವಾನಿರತ ಅಭ್ಯರ್ಥಿಗಳು ಈಗಾಗಲೇ ಪ್ರಕಟಿಸಿರುವ ಮೊದಲನೇ ಸುತ್ತಿನ ಸೂಚನೆಗಳನ್ನು ಪಾಲಿಸುವುದು).**

2) ಅಭ್ಯರ್ಥಿಗಳು ದಾಖಲೆಗಳ ಪರೀಶೀಲನೆಗೆ ಸಂಬಂಧಿಸಿದಂತೆ ಗೊತ್ತುಪಡಿಸಿರುವ ವೇಳಾಪಟ್ಟಿ ಪ್ರಕಾರ ಖುದ್ದಾಗಿ ಹಾಜರಿರಬೇಕು ಅಂದರೆ ಅವರ ಪರವಾಗಿ ಬೇರೆ ಯಾರೂ ಹಾಜರಾಗುವಂತಿಲ್ಲ ಅಥವಾ ಅವರ ಪರವಾಗಿ ಬಂದಿರುವ ಯಾರೇ ಪ್ರತಿನಿಧಿಗಳಿಗೆ ಹಾಜರಾಗಲೂ ಅವಕಾಶ ನೀಡುವುದಿಲ್ಲ.

3) ವಿದ್ಯಾರ್ಥಿಗಳು ದಾಖಲೆಗಳ ಪರಿಶೀಲನೆಗೆ ಬರುವ ಸಮಯದಲ್ಲಿ ತಾವು ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಕೋರಿರುವ ಮೀಸಲಾತಿಗಳಿಗೆ ಪೂರಕವಾದ ಎಲ್ಲಾ ಮೂಲ ದಾಖಲೆಗಳನ್ನು ಮತ್ತು ದೃಢೀಕರಿಸಿರುವ ಅವುಗಳ ಜೆರಾಕ್ಸ್ ಪ್ರತಿಗಳ ಒಂದು ಸೆಟ್ಟನ್ನು ಕಡ್ಡಾಯವಾಗಿ ತರಬೇಕು. ಪರೀಶೀಲನೆಯ ದಿನದಂದು ಯಾವುದೇ ದಾಖಲೆ/ಪ್ರಮಾಣಪತ್ರ/ಅಂಕಪಟ್ಟಿಯನ್ನು ಹಾಜರುಪಡಿಸಲು ಯಾವುದೇ ವಿದ್ಯಾರ್ಥಿ ವಿಫಲನಾದ ಪಕ್ಷದಲ್ಲಿ ಅಂಥ ವಿದ್ಯಾರ್ಥಿಯ ದಾಖಲೆಗಳನ್ನು ಪರಿಶೀಲನೆ ಮಾಡುವುದಿಲ್ಲ ಮತ್ತು ಅವರ ನೋಂದಣಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದಿಲ್ಲ. ಅನಂತರ ಸೀಟು ಆಯ್ಕೆಗೆ ಸಂಭಂದಿಸಿದಂತೆ ಆಪ್ಷನ್ ಎಂಟ್ರಿ ಮಾಡಲು ಅಂತಹ ಅಭ್ಯರ್ಥಿಗಳು ಅರ್ಹತೆ ಹೊಂದುವುದಿಲ್ಲ.

**ವಿಶೇಷ ಪ್ರವರ್ಗದ ಅಭ್ಯರ್ಥಿಗಳು ನಿಗದಿಪಡಿಸಿದ ದಿನಾಂಕಗಳಂದು ಸಂಬಂದಿಸಿದ ಪ್ರಮಾಣ ಪತ್ರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, ಬೆಂಗಳೂರು ಕೇಂದ್ರದಲ್ಲಿ ಮಾತ್ರ ಸಲ್ಲಿಸಬೇಕು ವಿವರಗಳು ಈ ಕೆಳಗಿನಂತಿದೆ.**

| ದಿನಾಂಕ/ಸಮಯ | ವಿಶೇಷ ಪ್ರವರ್ಗ | ಪರಿಶೀಲನೆಯ ವಿವರ / ಪ್ರಮಾಣ ಪತ್ರಗಳನ್ನು ಸಲ್ಲಿಸುವುದು |
|---|---|---|
| 11.10.2019 | ವಿಕಲಚೇತನರು (Person with disability) | ವೈದ್ಯಕೀಯ ತಪಾಸಣೆಗೆ ಹಾಜರಾಗುವ ಸಮಯ ಬೆಳಗ್ಗೆ 10.00 ಘಂಟೆಗೆ |

**ದಾಖಲೆ ಪರಿಶೀಲನೆ ವೇಳಾಪಟ್ಟಿ**

| ದಿನಾಂಕ ಮತ್ತು ಕೋರ್ಸ್ | ಬೆಳಗಿನ ಅವಧಿ-1 ಬೆ.900 ರಿಂದ 11.00 ಹಾಜರಾಗುವ ಸಮಯ ಬೆ 8.45 ಕ್ರಮಸಂಖ್ಯೆಗಳು | | ಬೆಳಗಿನ ಅವಧಿ-2 ಬೆ.11.15 ರಿಂದ 1.15 ಹಾಜರಾಗುವ ಸಮಯ ಬೆ 10.45 ಕ್ರಮಸಂಖ್ಯೆಗಳು | | ಮಧ್ಯಾಹ್ನದ ಅವಧಿ-1 ಬೆ.200 ರಿಂದ 4.00 ಹಾಜರಾಗುವ ಸಮಯ ಬೆ 1.30 ಕ್ರಮಸಂಖ್ಯೆಗಳು | | ಮದ್ಯಾಹ್ನದ ಅವಧಿ-1 ಬೆ.4.15 ರಿಂದ 6.15 ಹಾಜರಾಗುವ ಸಮಯ ಮ 3.30 ಕ್ರಮಸಂಖ್ಯೆಗಳು | |
|---|---|---|---|---|---|---|---|---|
| | ಇಂದ | ವರೆಗೆ | ಇಂದ | ವರೆಗೆ | ಇಂದ | ವರೆಗೆ | ಇಂದ | ವರೆಗೆ |
| **10.10.2019** ಪಿ.ಬಿ.ಎಸ್ಸಿ ನರ್ಸಿಂಗ್ | 1 | 200 | 201 | 400 | 401 | 700 | 701 | 800 |
| **11.10.2019** ಪಿ.ಬಿ.ಎಸ್ಸಿ ನರ್ಸಿಂಗ್ | 801 | ಕೊನೆ ರ್‍ಯಾಂಕ್‌ವರೆಗೆ | | | | | | |
| **11.10.2019** ಬಿ.ಎಸ್.ಸಿ ಅಲೈಡ್ ಹೆಲ್ತ್ ಸೈನ್ಸ್ ಲ್ಯಾಟರಲ್ ಎಂಟ್ರಿ ( ಎಲ್ಲಾ ಏಳು ಕೋರ್ಸ್‌ಗಳು) | | | 01 | ಕೊನೆ ರ್‍ಯಾಂಕ್ ವರೆಗೆ | | | | |

5. ಅಭ್ಯರ್ಥಿಗಳು ಸಲ್ಲಿಸಬೇಕಾದ ಮೂಲ ದಾಖಲೆಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ

ಈ ಮುಂದೆ ಹೇಳಿರುವ ಮೂಲ ದಾಖಲೆಗಳು ಮತ್ತು ದೃಡೀಕರಿಸಿರುವ ಅವುಗಳ ಜೆರಾಕ್ಸ್ ಪ್ರತಿಗಳ ಒಂದು ಸೆಟ್ಟನ್ನು ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆಗಾಗಿ ಕಡ್ಡಾಯವಾಗಿ ಹಾಜರುಪಡಿಸಬೇಕು

i. ಭರ್ತಿ ಮಾಡಿ ಸಲ್ಲಿಸಿರುವ ಆನ್‌ಲೈನ್ ಅರ್ಜಿ ನಮೂನೆಯ ಅಂತಿಮ ಪ್ರತಿ.

ii. ಎಸ್.ಎಸ್.ಎಲ್.ಸಿ/10ನೇ ತರಗತಿಯ ಅಂಕಪಟ್ಟಿ.

iii. ದ್ವಿತಿಯ ಪಿಯುಸಿ /12ನೇ ತರಗತಿಯ ಅಂಕಪಟ್ಟಿ ಅನ್ವಯಿಸಿದಲ್ಲಿ ಮಾತ್ರ,

iv. ಪೋಸ್ಟ್ ಬೇಸಿಕ್ ಬಿ.ಎಸ್ಸಿ ನರ್ಸಿಂಗ್‌ಗೆ ಅಭ್ಯರ್ಥಿಗಳು ಜಿ.ಎನ್.ಎಂ. ನರ್ಸಿಂಗ್ ಅಂಕಪಟ್ಟಿಗಳು, ಜಿ.ಎನ್.ಎಂ. ಪ್ರಮಾಣ ಪತ್ರ ಹಾಗೂ ಕರ್ನಾಟಕ ನರ್ಸಿಂಗ್ ಪರಿಷತ್‌ನಿಂದ ಪಡೆದಂತಹ ರಿಜಿಸ್ಟರ್ ನರ್ಸಿಂಗ್ ಪ್ರಮಾಣ ಪತ್ರವನ್ನು ಪರಿಶೀಲನಾ ಸಂದರ್ಭದಲ್ಲಿ ಪ್ರತಿಗಳನ್ನು ಪ್ರಚುರಪಡಿಸಬೇಕು.

v. ಬಿ.ಎಸ್ಸಿ ಅಲೈಡ್ ಹೆಲ್ತ್ ಸೈನ್ಸ್ ಲ್ಯಾಟರಲ್ ಎಂಟ್ರಿ ಕೋರ್ಸ್‌ಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಪ್ಯಾರಾ ಮೆಡಿಕಲ್ ಮಂಡಳಿಯಿಂದ ನೀಡಿರುವ ಅಂಕಪಟ್ಟಿಗಳನ್ನು

vi. 1 ರಿಂದ ಜಿ.ಎನ್.ಎಂ./ ಡಿಪ್ಲಮೋವರೆಗೆ ಒಟ್ಟು 7 ವರ್ಷದ ವ್ಯಾಸಂಗ ಪ್ರಮಾಣಪತ್ರ.

- 1 ರಿಂದ 10ನೇ ತರಗತಿಯ ವ್ಯಾಸಂಗ ಪ್ರಮಾಣ ಪತ್ರಕ್ಕೆ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿ ಮೇಲುರುಜು ಸಹಿ ಹೊಂದಿರಬೇಕು.
- ಪದವಿ ಪೂರ್ವ ವ್ಯಾಸಂಗ ಪ್ರಮಾಣ ಪತ್ರಕ್ಕೆ ಸಂಬಂದಿಸಿದ ಪದವಿ ಪೂರ್ವ ಉಪ ನಿರ್ದೇಶಕರ ಮೇಲುರುಜು ಸಹಿ ಹೊಂದಿರಬೇಕು.
- (CBSE / ICSE ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳಿಗೆ ಬಿ.ಇ.ಒ ಅಥವಾ ಡಿ.ಡಿ.ಪಿ.ಯು ಮೇಲುರುಜು ಸಹಿ ಮಾಡುವ ಅಗತ್ಯವಿರುವುದಿಲ್ಲ)

| **ಈ ಮುಂದಿನ ದಾಖಲೆಗಳನ್ನು ಅನ್ವಯವಾಗುವಂತಿದ್ದ ಪಕ್ಷದಲ್ಲಿ ಮಾತ್ರ ಹಾಜರುಪಡಿಸತಕ್ಕದ್ದು** | |
|---|---|
| VI | ಮೀಸಲಾತಿ ಪ್ರಯೋಜನಗಳನ್ನು ಕೋರುವುದಕ್ಕೆ ಸಂಭಂಧಿಸಿದಂತೆ ಸಂಬಂಧಪಟ್ಟ ತಹಸೀಲ್ದಾರ್‌ರವರಿಂದ ಪಡೆದಿರುವ ಜಾತಿ ಪ್ರಮಾಣ ಪತ್ರ/ಜಾತಿ ಮತ್ತು ಆದಾಯ ಪ್ರಮಾಣಪತ್ರ/ಆದಾಯ ಪ್ರಮಾಣ ಪತ್ರಗಳು (ಆಧಿಕಾರವ್ಯಾಪ್ತಿಯಿರುವ ಸಂಬಂಧಪಟ್ಟ ತಹಸೀಲ್ದಾರ್‌ರವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಂದರ್ಭದಲ್ಲಿ ನಮೂನೆ 'ಡಿ' ನಲ್ಲಿ ಮತ್ತು ಪ್ರವರ್ಗ–1ರ ಸಂದರ್ಭದಲ್ಲಿ ನಮೂನೆ 'ಇ' ನಲ್ಲಿ ಇತರ ಹಿಂದುಳಿದ ವರ್ಗಗಳಾದ 2ಎ.2ಬಿ,3ಎ ಮತ್ತು 3ಬಿಗಳಂತಹ ಸಂದಂರ್ಭದಲ್ಲಿ ನಮೂನೆ ಎಫ್ ನಲ್ಲಿ ನೀಡಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು) |
| ಸೂಚನೆ | ಅಲ್ಲದೆ ಮೀಸಲು ಪ್ರವರ್ಗದಡಿಯಲ್ಲಿ ಸೀಟನ್ನು ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1ಕ್ಕೆ ಸೇರಿರುವ ವಿದ್ಯಾರ್ಥಿಗಳು, ಅಧಿಕಾರವ್ಯಾಪ್ತಿಯ ತಹಸೀಲ್ದಾರ್‌ರವರು ನೀಡಿರುವ ಆದಾಯ ಪ್ರಮಾಣಪತ್ರವನ್ನು ಸಹ ಪರಿಶೀಲನೆಗಾಗಿ ಹಾಜರುಪಡಿಸಬೇಕು.<br>ಆದರೆ, ವಿದ್ಯಾರ್ಥಿಯು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಮೀಸಲಾತಿ ಪ್ರಯೋಜನವನ್ನು ಕೋರಿದ್ದ ಪಕ್ಷದಲ್ಲಿ ಮಾತ್ರ ಅವರು ಜಾತಿ ಪ್ರವರ್ಗ ಮತ್ತು ಆದಾಯದ ಸೌಲಭ್ಯಗಳನ್ನು ಕೋರಲು ಅರ್ಹರಾಗಿರುತ್ತಾರೆ |
| VII | ಹೈದರಾಬಾದ್ – ಕರ್ನಾಟಕ ಪ್ರವೇಶ ಮಿಸಲಾತಿ (ಅನುಚೇದ 371 (ಜೆ) ಯನ್ನು ಕೋರುವ ವಿದ್ಯಾರ್ಥಿಗಳು ಸಂಬಂಧಪಟ್ಟ ಉಪ ವಿಭಾಗಧಿಕಾರಿ (ಅಸಿಸ್ಟೆಂಟ್ ಕಮಿಷನರ್)ಅವರು ಅನುಬಂಧ–ಎ (ಅರ್ಹತಾ ಪ್ರಮಾಣಪತ್ರ ನಿಯಮ 3(3) ರಲ್ಲಿ ನೀಡಿರುವ ಪ್ರಮಾಣಪತ್ರವನ್ನು ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಸಲ್ಲಿಸಬೇಕು |

## ವಿಕಲಚೇತನ ಅಭ್ಯರ್ಥಿಗಳಿಗೆ ಸೂಚನೆ

2019–20ನೇ ಸಾಲಿನ ಪೋಸ್ಟ್ ಬೇಸಿಕ್ ಬಿ.ಎಸ್ಸಿ ನರ್ಸಿಂಗ್ ಮತ್ತು ಬಿ.ಎಸ್.ಸಿ ಅಲೈಡ್ ಹೆಲ್ತ್ ಸೈನ್ಸ್ (ಲ್ಯಾಟರಲ್ ಎಂಟ್ರಿ ) ಕೋರ್ಸ್‌ಗಳ ಪ್ರವೇಶಕ್ಕೆ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ ವಿಕಲಚೇತನ ಅಭ್ಯರ್ಥಿಗಳು ವೈದ್ಯಕೀಯ ಬೋರ್ಡ್, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ ಬೆಂಗಳೂರು ಇಲ್ಲಿ ದಿನಾಂಕ:11–10–2019ರ ಬೆಳಗ್ಗೆ 10.00 ಘಂಟೆಗೆ ವಿಕಲಚೇತನಕ್ಕೆ ಸಂಬಂದಪಟ್ಟ ದಾಖಲೆಗಳೊಂದಿಗೆ ವೈದ್ಯಕೀಯ ತಪಾಸಣೆಗೆ ಹಾಜರಾಗಬೇಕು.

ವೈದ್ಯಕೀಯ ತಪಾಸಣೆಯಲ್ಲಿ ಅರ್ಹರಾದಲ್ಲಿ ಮಾತ್ರ ಅಭ್ಯರ್ಥಿಗಳು ವಿಕಲಚೇತನ ಕೋಟಾದ ಸೀಟು ಹಂಚಿಕೆಗೆ ಅರ್ಹತೆಯನ್ನು ಪಡೆಯುತ್ತಾರೆ. ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ https://kea.kar.nic.in ಬೇಟಿ ನೀಡಬಹುದಾಗಿದೆ.

## Attention to Persons with disability Candidates

Admission for the academic year 2019-20 to Post Basic B.Sc. Nursing, and B.Sc Allied Health Science (Lateral Entry) Courses, Persons with disability candidates claiming in online application have to appear before Medical Board at Karnataka Examination Authority, Malleshwaram, Bengaluru on 11-10-2019 at 10.00 AM. Candidate has to present before the Medical Board with necessary documents related to disability. Further details visit the KEA website https://kea.kar.nic.in.

| | | |
|---|---|---|
| 11.10.2019 | ವಿಕಲಚೇತನರು (Persons with disability) | ವೈದ್ಯಕೀಯ ತಪಾಸಣೆಗೆ ಹಾಜರಾಗುವ ಸಮಯ ಬೆಳಗ್ಗೆ 10.00 ಘಂಟೆಗೆ |

ಸಹಿ/–

ನಿರ್ದೇಶಕರು, ವೈದ್ಯಕೀಯ ಶಿಕ್ಷಣ

ದಿನಾಂಕ 05.10.2019

ಸ್ಥಳ:– ಬೆಂಗಳೂರು